(ಸದನವು ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಪ್ರಾರಂಭಗೊಂಡಿತು)

ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದರು.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ ಮಹತ್ವವಾದ ವಿಚಾರ ಏನೆಂದರೆ, ಆಂಧ್ರಪ್ರದೇಶ...

ಅಧ್ಯಕ್ಷರು: ಒಂದು ಪ್ರಕಟಣೆ ಇದೆ. ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡುವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 30.03.05ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿದೆ.

1. ಕರ್ನಾಟಕ ಧನ ವಿನಿಯೋಗ (ಲೇಖಾನುಧಾನ) ವಿಧೇಯಕ 2005
2. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2005
3. ಕರ್ನಾಟಕ ಅಭ್ಕಾರಿ (ತಿದ್ದುಪಡಿ) ವಿಧೇಯಕ, 2005
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ ವಿಧೇಯಕ, 2005)

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ಆಂಧ್ರಪ್ರದೇಶ ...

ಅಧ್ಯಕ್ಷರು:– Adjournment motion ಮೂಲಕ ತಾವು ಪ್ರಸ್ತಾಪಿಸಬೇಕೆಂದಿರುವ ವಿಷಯವನ್ನು ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಇದು ಬಹಳ ಮಹತ್ವದ ವಿಷಯ. ಈಗಾಗಲೇ 21 ಕಾಮಗಾರಿಗಳಿಗೆ 4 ಸಾವಿರ ಕೋಟಿ ರೂಪಾಯಿಗಳಷ್ಟು ವೆಚ್ಚದ ಯೋಜನೆಗಳಿಗೆ ಈಗಾಗಲೇ ಇವತ್ತು ಅನುಮತಿ ಕೊಟ್ಟು clearance ಕೊಟ್ಟು, ಈಗಾಗಲೇ ಹಲವಾರು ಯೋಜನೆಗಳ ಕೆಲಸ ಆಂಧ್ರದಲ್ಲಿ ಪ್ರಾರಂಭವಾಗಿದೆ. ಕೃಷ್ಣಾ ನದಿ ಕಣಿವೆ ಬಗ್ಗೆ ಈಗಾಗಲೇ ಸಾಕಷ್ಟು ಇಲ್ಲಿ ಚರ್ಚೆಯಾಗಿದೆ. ಇದಲ್ಲದೆ ಹೊಸದಾಗಿ ಒಂದು tribunal constitute ಆಗಿದೆ. ಇವತ್ತು 'ಎ' ಸ್ಕೀಮ್ ಪ್ರಕಾರ ಏನು ನೀರನ್ನು utilisation ಮಾಡಬೇಕಾಗಿತ್ತೋ, ನಮ್ಮ ರಾಜ್ಯ ಸರ್ಕಾರ utilisation